**<u>ಸಾಕ್ಷಿಯನ್ನು ದಿನಾಂಕಃ 09.02.2026 ರಂದು ಕರೆದು ಪ್ರಮಾಣವಚನ ಭೋಧಿಸಲಾಯಿತು</u>**

**<u>ಮುಂದುವರೆದ ಪಾಟೀಸವಾಲು : ಆರೋಪಿ ಪರ ಶ್ರೀ ಆರ್.ಬಿ.ಆರ್. ವಕೀಲರಿಂದ.</u>**

1. ಈ ಪ್ರಕರಣದಲ್ಲಿ ಎಷ್ಟು ಮೊತ್ತಕ್ಕೆ ದೂರು ಸಲ್ಲಿಸಿದ್ದೇನೆ ಎಂದರೆ ಸಾಕ್ಷಿ ನಾನು ಆರೋಪಿ ವಿರುದ್ಧ ಮೂರು ದೂರು ಸಲ್ಲಿಸಿದ್ದು ಅವುಗಳ ಸಂಖ್ಯೆ ಸಿಸಿ.19341/2023, ಸಿಸಿ.19343/2023 ಮತ್ತು ಸಿಸಿ.19345/2023 ಆಗಿದ್ದು, ಮೂರು ಪ್ರಕರಣಗಳ ಒಟ್ಟು ಮೊತ್ತ 1 ಕೋಟಿ 50 ಲಕ್ಷ ಆಗಿದೆ, ಈ ಪ್ರಕರಣವನ್ನು 25 ಲಕ್ಷಕ್ಕೆ ಸಲ್ಲಿಸಿದ್ದೇನೆ ಎನ್ನುತ್ತಾರೆ.

2. ಈ ದೂರಿನಲ್ಲಿ ನಾನು ನಮ್ಮ ವಕೀಲರ ಮೂಲಕ ನೀಡಿರುವ ನೋಟೀಸು ಆರೋಪಿಗೆ ತಲುಪಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ-7 ಟ್ರಾಕ್ ಕನ್ಸೈನ್ಮೆಂಟ್ ಪ್ರಕಾರ item returned insufficient address ಎಂದು ಇದೆ ಎಂದರೆ ಸರಿ. ನಿಪಿ-7 ಟ್ರಾಕ್ ಕನ್ಸೈನ್ಮೆಂಟಿಗೂ ಹಾಗೂ ನಿಪಿ-4 ಅಂಚೆ ರಸೀದಿಗೂ ಪರಸ್ಪರ ಸಂಬಂಧ ಇಲ್ಲ ಎಂದರೆ ಸಾಕ್ಷಿ ನಮ್ಮ ವಕೀಲರನ್ನು ಕೇಳಬೇಕು, ದಾಖಲೆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ-4 ಅಂಚೆ ರಸೀದಿಯಲ್ಲಿ ಆರ್ ಕೆ ನಂ.712153294IN ಎಂದು ಇದ್ದು, ನಿಪಿ-7 ರಲ್ಲಿ ಆರ್ ಕೆ ನಂ.712153419 ಎಂದು ಇದೆ ಎಂದರೆ ಸರಿ.

3. ನನ್ನ ಮುಖ್ಯ ವಿಚಾರಣೆಯ 5ನೇ ಪ್ಯಾರಾದಲ್ಲಿ ಆರೋಪಿ ಕಾಮನ್ ಫ್ರೆಂಡ್ ಮೂಲಕ ಬಂದು ಕೇಳಿದ್ದರು ಎಂದು ಹೇಳಿದ್ದು, ಪಾಟೀಸವಾಲಿನಲ್ಲಿ ಆ ಕಾಮನ್ ಫ್ರೆಂಡ್ ಯಾರು ಎಂದು ಗೊತ್ತಿಲ್ಲ

ಎಂದು ತಿಳಿಸಿದ್ದು, ಹಾಗಿದ್ದಲ್ಲಿ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮತ್ತೊಮ್ಮೆ ನನ್ನ ಮುಖ್ಯ ವಿಚಾರಣೆಯಲ್ಲಿ ಇರುವುದು ಸರಿ ಎನ್ನುತ್ತಾರೆ. ಹಾಗಿದ್ದಲ್ಲಿ ಆ ಕಾಮನ್ ಫ್ರೆಂಡ್ ಯಾರು ಎಂದರೆ ಸಾಕ್ಷಿ ಕೆ ರಮೇಶ್ ಎನ್ನುತ್ತಾರೆ. ಅವರ ತಂದೆಯ ಹೆಸರು ಕೃಷ್ಣಾ ರೆಡ್ಡಿ. ಆತ ದೊಡ್ಡಕನ್ನಳ್ಳಿಯಲ್ಲಿ ವಾಸವಿದ್ದಾರೆ ಎನ್ನುತ್ತಾರೆ. ಅವರನ್ನು ಸಾಕ್ಷಿ ಮಾಡಿಸಲು ಸಾಧ್ಯವಿದೆ.

4. ಮಾರ್ಚ 2013 ರಲ್ಲಿ ಯಾವ ದಿನಾಂಕದಂದು ಆರೋಪಿ ಹಣ ಕೇಳಿದ್ದರು ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ ಎನ್ನುತ್ತಾರೆ. ಸಾಕ್ಷಿ ಸ್ವತಃ ಮುಂದುವರೆದು 2013 ರಿಂದ 2014 ರವರೆಗೂ ಹಣ ಪಡೆದಿದ್ದಾರೆ ಎನ್ನುತ್ತಾರೆ. ನಾನು ಆರೋಪಿಗೆ ಮೊದಲ ಬಾರಿ ಮಾರ್ಚ 2013 ರಲ್ಲಿ ನೀಡಿದ್ದೇನೆ, ದಿನಾಂಕ ನೆನಪಿಲ್ಲ ಎನ್ನುತ್ತಾರೆ. ಹಣ ಕೇಳಲು ಆರೋಪಿ ಮತ್ತು ರಮೇಶ್ ಒಟ್ಟಾಗಿ ಬಂದಿದ್ದರೇ ಎಂದರೆ ಸಾಕ್ಷಿ ರಮೇಶ್ ನಮ್ಮ ಮನೆಯಲ್ಲಿಯೇ ಇದ್ದರು, ಆರೋಪಿ ನಂತರ ಬಂದರು ಎನ್ನುತ್ತಾರೆ. ರಮೇಶ್ ರವರಿಗೂ ಆರೋಪಿಗೂ ಏನೂ ಸಂಬಂಧ ಇಲ್ಲ. ನಾನು ಆರೋಪಿಗೆ ಮೊದಲ ಬಾರಿ 25 ಲಕ್ಷ ಕೊಟ್ಟೆ ಎನ್ನುತ್ತಾರೆ. ಸದರಿ 25 ಲಕ್ಷ ಹಣವನ್ನು ಎಲ್ಲಿಂದ ತಂದೆ ಎಂದರೆ ಮನೆಯಲ್ಲಿ ಇತ್ತು, ಬ್ಯಾಂಕಿನಿಂದ ಡ್ರಾ ಮಾಡಿ ತಂದಿದ್ದೆ ಎನ್ನುತ್ತಾರೆ. ಫೆಡರಲ್ ಬ್ಯಾಂಕ್ ಅಥವಾ ಕೊಟಕ್ ಮಹಿಂದ್ರಾ ಬ್ಯಾಂಕ್ ಎರಡೂ ಬ್ಯಾಂಕಗಳಲ್ಲಿ ಖಾತೆ ಇದೆ, ಅವುಗಳಲ್ಲಿ ತಂದಿರಬಹುದು ಎನ್ನುತ್ತಾರೆ. ಸಾಕ್ಷಿ ಮತ್ತೊಮ್ಮೆ ಫೆಡರಲ್ ಬ್ಯಾಂಕ್ ಅಲ್ಲ, ಧನಲಕ್ಷ್ಮಿ ಬ್ಯಾಂಕ್ ಇರಬಹುದು ಎನ್ನುತ್ತಾರೆ. ಆ ರೀತಿ ಬ್ಯಾಂಕಿನಿಂದ ಹಣ ಡ್ರಾ ಮಾಡಿರುವ ಬಗ್ಗೆ ದಾಖಲೆ ಹಾಜರು ಮಾಡಿಲ್ಲ, ಹಾಜರು ಮಾಡಲು

ನನಗೆ ಏನೂ ತೊಂದರೆ ಇಲ್ಲ. ಆರೋಪಿಗೆ ಸದರಿ 25 ಲಕ್ಷ ಕೊಟ್ಟ ಬಗ್ಗೆ ಆತನಿಂದ ಯಾವುದೇ ದಾಖಲೆ ಪಡೆದುಕೊಂಡಿಲ್ಲ.

5. ಆರೋಪಿಗೆ ನಾನು ಎರಡನೇ ಬಾರಿ 75 ಲಕ್ಷವನ್ನು ಕೊಟ್ಟಿದ್ದೆ, ಯಾವ ತಿಂಗಳು ಮತು ದಿನಾಂಕ ಎನ್ನುವುದು ಗೊತ್ತಿಲ್ಲ, 2013 ರಿಂದ 2014 ರ ಅವಧಿಯಲ್ಲಿ ಕೊಟ್ಟಿದ್ದೇನೆ ಎನ್ನುತ್ತಾರೆ. ಸದರಿ 75 ಲಕ್ಷವನ್ನು ನಮ್ಮ ಮನೆಯಲ್ಲಿಯೇ ನೀಡಿದ್ದೇನೆ. ಸದರಿ ಹಣವನ್ನು ಎಲ್ಲಿಂದ ತರಲಾಯಿತು ಎಂದರೆ ಸಾಕ್ಷಿ ಬ್ಯಾಂಕ್ ನಿಂದ ಡ್ರಾ ಮಾಡಿದ್ದೆ ಮತ್ತು ಬ್ಯುಸಿನೆಸ್ ನಿಂದ ಬಂದಿದ್ದ ಹಣದಲ್ಲಿ ಸೇರಿಸಿ ನೀಡಿದ್ದೇನೆ ಎನ್ನುತ್ತಾರೆ. ಬ್ಯಾಂಕಿನಿಂದ ಎಷ್ಟು ಡ್ರಾ ಮಾಡಿದ್ದೆ ಎನ್ನುವುದು ಗೊತ್ತಿಲ್ಲ. ಮನೆಯಲ್ಲಿ ಎಷ್ಟು ಹಣ ಇತ್ತು ಎನ್ನುವುದು ಗೊತ್ತಿಲ್ಲ. ಸದರಿ ಅವಧಿಯಲ್ಲಿ ನನ್ನ ಬ್ಯುಸಿನೆಸ್ ನಿಂದ ಬಂದಿದ್ದ ಎಷ್ಟು ಮೊತ್ತವನ್ನು ಸೇರಿಸಿದ್ದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ 75 ಲಕ್ಷ ಕೊಡುವಾಗ ಅದಕ್ಕಾಗಿ ಹಣವನ್ನು ಯಾವಾಗ ಡ್ರಾ ಮಾಡಿದೆ ಎಂದರೆ ಸಾಕ್ಷಿ ಈಗ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಮೊದಲು 25 ಲಕ್ಷ ಕೊಟ್ಟ ನಂತರ ಎರಡು ತಿಂಗಳು ಬಿಟ್ಟು 75 ಲಕ್ಷವನ್ನು ಕೊಟ್ಟಿದ್ದೇನೆ ಎನ್ನುತ್ತಾರೆ. ಆರೋಪಿ 75 ಲಕ್ಷವನ್ನು ಯಾವ ತಿಂಗಳು ವರ್ಷ ಕೇಳಿದರು ಎನ್ನುವುದು ಗೊತ್ತಿಲ್ಲ 2014 ರಲ್ಲಿ ಕೇಳಿದ್ದಾರೆ. ಆರೋಪಿ ಹಣ ಕೇಳಿದ ಎಷ್ಟು ತಿಂಗಳ ಬಳಿಕ ಬ್ಯಾಂಕಿನಿಂದ ಹಣ ಡ್ರಾ ಮಾಡಿದ್ದೆ ಎಂದರೆ ಗೊತ್ತಿಲ್ಲ. ಸ್ಟೇಟ್‌ಮೆಂಟ್ ನೋಡಿ ಹೇಳುತ್ತೇನೆ ಎನ್ನುತ್ತಾರೆ.

6. ಆರೋಪಿಗೆ ನಾನು ಮೂರನೇ ಬಾರಿ 50 ಲಕ್ಷವನ್ನು ಕೊಟ್ಟಿದ್ದೆ, ಯಾವ ತಿಂಗಳು ಮತ್ತು ದಿನಾಂಕ ಎನ್ನುವುದು ಗೊತ್ತಿಲ್ಲ, 2013 ರಿಂದ 2014 ರ ಅವಧಿಯಲ್ಲಿ ಕೊಟ್ಟಿದ್ದೇನೆ ಎನ್ನುತ್ತಾರೆ. ಸದರಿ 50 ಲಕ್ಷವನ್ನು ನಮ್ಮ

ಮನೆಯಲ್ಲಿಯೇ ನೀಡಿದ್ದೇನೆ. ಸದರಿ ಹಣವನ್ನು ಎಲ್ಲಿಂದ ತರಲಾಯಿತು ಎಂದರೆ ಸಾಕ್ಷಿ ಬ್ಯಾಂಕ್ ನಿಂದ ಡ್ರಾ ಮಾಡಿದ್ದೆ ಮತ್ತು ಬ್ಯುಸಿನೆಸ್ ನಿಂದ ಬಂದಿದ್ದ ಹಣದಲ್ಲಿ ಸೇರಿಸಿ ನೀಡಿದ್ದೇನೆ ಎನ್ನುತ್ತಾರೆ. ಬ್ಯಾಂಕಿನಿಂದ ಎಷ್ಟು ಡ್ರಾ ಮಾಡಿದ್ದೆ ಎನ್ನುವುದು ಗೊತ್ತಿಲ್ಲ. ಮನೆಯಲ್ಲಿ ಎಷ್ಟು ಹಣ ಇತ್ತು ಎನ್ನುವುದು ಗೊತ್ತಿಲ್ಲ. ಸದರಿ ಅವಧಿಯಲ್ಲಿ ನನ್ನ ಬ್ಯುಸಿನೆಸ್ ನಿಂದ ಬಂದಿದ್ದ ಎಷ್ಟು ಮೊತ್ತವನ್ನು ಸೇರಿಸಿದ್ದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ 50 ಲಕ್ಷ ಕೊಡುವಾಗ ಅದಕ್ಕಾಗಿ ಹಣವನ್ನು ಯಾವಾಗ ಡ್ರಾ ಮಾಡಿದೆ ಎಂದರೆ ಸಾಕ್ಷಿ ಈಗ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಎರಡನೇ ಬಾರಿ 75 ಲಕ್ಷವನ್ನು ಕೊಟ್ಟ ನಂತರ ಮೂರು ತಿಂಗಳು ಬಿಟ್ಟು 50 ಲಕ್ಷವನ್ನು ಕೊಟ್ಟಿದ್ದೇನೆ ಎನ್ನುತ್ತಾರೆ. ಆರೋಪಿ 50 ಲಕ್ಷವನ್ನು ಯಾವ ತಿಂಗಳು ವರ್ಷ ಕೇಳಿದರು ಎನ್ನುವುದು ಗೊತ್ತಿಲ್ಲ 2014 ರಲ್ಲಿ ಕೇಳಿದ್ದಾರೆ. ಆರೋಪಿ ಹಣ ಕೇಳಿದ ಎಷ್ಟು ತಿಂಗಳ ಬಳಿಕ ಬ್ಯಾಂಕಿನಿಂದ ಹಣ ಡ್ರಾ ಮಾಡಿದ್ದೆ ಎಂದರೆ ಗೊತ್ತಿಲ್ಲ. ಸ್ಟೇಟ್‌ಮೆಂಟ್ ನೋಡಿ ಹೇಳುತ್ತೇನೆ ಎನ್ನುತ್ತಾರೆ. ನಾನು ಎರಡನೇ ಬಾರಿ ಮತ್ತು 3ನೇ ಬಾರಿ ಹಣ ಕೊಟ್ಟಾಗಲೂ ನಾನು ಯಾವುದೇ ಕರಾರು ಅಥವಾ ರಸೀದಿಯನ್ನು ಆರೋಪಿಯಿಂದ ಬರೆಸಿಕೊಂಡಿಲ್ಲ. ಸಾಕ್ಷಿ ಸ್ವತಃ ಮುಂದುವರೆದು ಆರೋಪಿಯ ಜಮೀನಿನ ದಾಖಲೆಗಳನ್ನು ನನಗೆ ಕೊಟ್ಟಿದ್ದರು ಎನ್ನುತ್ತಾರೆ. ಯಾವ ಜಮೀನಿನ ದಾಖಲೆಗಳು ಎಂದರೆ ನನಗೆ ಈಗ ಹೇಳಲು ಸಾಧ್ಯವಿಲ್ಲ, ನೋಡಿಕೊಂಡು ಹೇಳುತ್ತೇನೆ ಎನ್ನುತ್ತಾರೆ. ನನ್ನಿಂದ 3 ಬಾರಿ ಹಣ ಪಡೆದಿದ್ದು, ಯಾವ ಸಂದರ್ಭಗಳಲ್ಲಿ ದಾಖಲೆಗಳನ್ನು ನೀಡಲಾಗಿತ್ತು ಎಂದರೆ ಸಾಕ್ಷಿ ಯಾವಾಗ ಎನ್ನುವುದು ನನಗೆ ಗೊತ್ತಿಲ್ಲ, ದಾಖಲೆಗಳನ್ನು ಕೊಟ್ಟಿದ್ದರು ನನ್ನ ಬಳಿ ಇದೆ ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು**)**

**(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ)**

**19ನೇ ಅಪರ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್, ಬೆಂಗಳೂರು**

**C.C.NO. 19341/2023**
**PW1-ವೇಣುಗೋಪಾಲ್**

**C.C.NO. 19341/2023**
**PW1-ವೇಣುಗೋಪಾಲ್**

**C.C.NO. 19341/2023**
**PW1-ವೇಣುಗೋಪಾಲ್**

**C.C.NO. 19341/2023**
**PW1-ವೇಣುಗೋಪಾಲ್**

**C.C.NO. 19341/2023**
**PW1-ವೇಣುಗೋಪಾಲ್**